ESTD : 1916 Phone : 22216820 / 22278462

# The Comptrollers Office Co-operative Bank Ltd.

**(A Bank of LIC Employees)**
No. 209, "Mahalakshmi", Cubbonpet Main Road, Bangalore - 560 002
E-mail : cocb1916@gmail.com
www.cocb1916.com

# ನಿರ್ದೇಶಕ ಮಂಡಳಿ ಚುನಾವಣಾ ತಿಳುವಳಿಕೆ ಪತ್ರ

# ಹಾಗೂ

# ಚುನಾವಣಾ ವೇಳಾಪಟ್ಟಿ

## Notice of Election to the Board of Directors & Election Schedule

**30.07.2023**

**ದೇವಾಂಗ ಸಂಘ**

ನಂ. 14, "ದೇವಾಂಗ ಸಂಘ" ಹಾಸ್ಟಲ್ ರಸ್ತೆ, ಸಿಲ್ವರ್ ಜ್ಯೂಬಿಲಿ ಕಟ್ಟಡ,
ಬಿಬಿಎಂಪಿ ಕಛೇರಿಯ ಹಿಂಭಾಗ, ಸಂಪಂಗಿರಾಮನಗರ, ಬೆಂಗಳೂರು – 27

**ದಿ ಕಂಟ್ರೋಲರ್ಸ್ ಆಫೀಸ್**
**ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ**
(ಎಲ್.ಐ.ಸಿ. ನೌಕರರ ಬ್ಯಾಂಕ್)
ನಂ.209, 'ಮಹಾಲಕ್ಷ್ಮಿ', ಕಬ್ಬನ್‌ಪೇಟೆ ಮುಖ್ಯರಸ್ತೆ, ಬೆಂಗಳೂರು-02
ಫೋನ್ ನಂ. 22216820 / 22278462

## ಚುನಾವಣಾ ತಿಳುವಳಿಕೆ ಪತ್ರ

ಮೇಲ್ಕಂಡ ಬ್ಯಾಂಕಿನ ನಿರ್ದೇಶಕ ಮಂಡಳಿಯ ಚುನಾವಣೆ ದಿನಾಂಕ : 30.07.2023 ರಂದು ಭಾನುವಾರ ಬೆಳಿಗ್ಗೆ 9-00 ಗಂಟೆಯಿಂದ ಮಧ್ಯಾಹ್ನ 4-00 ಗಂಟೆಯವರೆಗೆ, **'ದೇವಾಂಗ ಸಂಘ'**, ನಂ. 14, **"ದೇವಾಂಗ ಸಂಘ"** ಹಾಸ್ಟಲ್ ರಸ್ತೆ, ಸಿಲ್ವರ್ ಜ್ಯೂಬಿಲಿ ಕಟ್ಟಡ, ಬಿಬಿಎಂಪಿ ಕಛೇರಿಯ ಹಿಂಭಾಗ, ಸಂಪಂಗಿರಾಮನಗರ, ಬೆಂಗಳೂರು-27 ಇಲ್ಲಿ ನಡೆಯಲಿದೆ. ಇದರ ವೇಳಾಪಟ್ಟಿಯನ್ನು ಈ ಮುಂದೆ ಕೊಡಲಾಗಿದೆ. ಅರ್ಹ ಸದಸ್ಯರು ಚುನಾವಣೆಯಲ್ಲಿ ಮತ ಚಲಾಯಿಸಬೇಕಾಗಿ ವಿನಂತಿ.

**ಲಕ್ಷ್ಮಿ ಎನ್.**
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

ಸ್ಥಳ : ಬೆಂಗಳೂರು
ದಿನಾಂಕ: 14.07.2023

**ಸೂಚನೆ:**

1. ಚುನಾವಣೆಯಲ್ಲಿ ಭಾಗವಹಿಸಲು ಈ ತಿಳುವಳಿಕೆ ಪತ್ರ ಹಾಗೂ ಗುರುತಿನ ಚೀಟಿಯನ್ನು ತಪ್ಪದೇ ತರಬೇಕೆಂದು ವಿನಂತಿಸುತ್ತೇವೆ.
2. ಗುರುತಿನ ಚೀಟಿಯನ್ನು ಪಡೆಯದೆ ಇರುವ ಸದಸ್ಯರು ಬ್ಯಾಂಕಿನ ಪ್ರಧಾನ ಕಛೇರಿ ವೇಳೆಯಲ್ಲಿ ಭಾವಚಿತ್ರ ಹಾಗೂ ವಿವರಗಳನ್ನು ನೀಡಿ ಪಡೆಯಬಹುದಾಗಿದೆ.

# The Comptrollers Office Co-operative Bank Ltd.

**(A Bank of LIC Employees)**

No. 209, “Mahalakshmi”, Cubbonpet Main Road, Bangalore - 560 002

E-mail : cocb1916@gmail.com

## Notice of Election to the Board of Directors

The Election to the Board of Directors of the Bank will be held on 30.07.2023 Sunday from 9.00 am to 4.00 p.m at “Devanga Sangha”, No.14, Devanga Sangha Hostel Road, Silver Jublee buliding, Behind BBMP office, Sampangiramanagara, Bangalore -27 The Calender of events for the election is enclosed herewith. All the eligible members are requested to take part and exercise their vote.

**Lakshmi N.**
Chief Executive Officer

Place : Bangalore
Date : 14.07.2023

**Note :**

1. Members are requested to bring this notice and the Identity Card to participate in Election, without Fail.
2. Members who have not received Identity Cards are requested to furnish a copy of the photograph and particulars & obtain the card.

# ನಮೂನೆ ನಂ.12

ನಿಯಮ 14(3)

ಚುನಾವಣಾ ಸೂಚನಾ ಪತ್ರ

**ದಿ ಕಂಟ್ರೋಲರ್ಸ್ ಆಫೀಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., ನಂ. 209 "ಮಹಾಲಕ್ಷ್ಮೀ," ಕಬ್ಬನ್‌ಪೇಟ ಮುಖ್ಯ ರಸ್ತೆ ಬೆಂಗಳೂರು 560002,** ಇದರ ಆಡಳಿತ ಮಂಡಳಿ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ಮುಂದಿನ 5 ವರ್ಷಗಳ ಅವಧಿಗೆ ಸಾಮಾನ್ಯ, ಪರಿಶಿಷ್ಟ ಜಾತಿ ಮೀಸಲು, ಪರಿಶಿಷ್ಟ ಪಂಗಡ ಮೀಸಲು, ಮಹಿಳಾ ಮೀಸಲು, ಹಿಂದುಳಿದ ವರ್ಗ ಮೀಸಲು ಸ್ಥಾನಗಳಿಗೆ **ದಿನಾಂಕ : 30.07.2023 ರ ಭಾನುವಾರದಂದು ಬೆಳಿಗ್ಗೆ 9.00 ಗಂಟೆಯಿಂದ ಅಪರಾಹ್ನ 4.00 ಗಂಟೆಯವರೆಗೆ,** ಸಹಕಾರ ಚುನಾವಣಾ ಪ್ರಾಧಿಕರ ಇವರ ಪತ್ರ ಸಂಖ್ಯೆ, ಸಚುಪ್ರ/ಬೆಂ/ಜಂನಿ/ಆಮಂಚು–ರಿಆನೇ/03/2023–24 ದಿನಾಂಕ 09.05.2023 ರಂತೆ **'ದೇವಂಗ ಸಂಘ' ದೇವಾಂಗ ಸಂಘದ ಹಾಸ್ಟೆಲ್ ರಸ್ತೆ,** ಬಿಬಿಎಂಪಿ ಕಛೇರಿ ಹಿಂಭಾಗ, ಸಿಲ್ವರ್ ಜ್ಯೂಬಿಲಿ ಕಟ್ಟಡ, ಸಂಪಂಗಿರಾಮನಗರ, ಬೆಂಗಳೂರು – 560027 ಇಲ್ಲಿ ನಡೆಸಲಾಗುವುದೆಂದು ನೋಟೀಸು ನೀಡಲಾಗಿದೆ.

ಚುನಾವಣಾ ವೇಳಾಪಟ್ಟಿ ಈ ಕೆಳಗಿನಂತೆ ಇರುತ್ತದೆ.

| | | |
|---|---|---|
| 1. | ಚುನಾವಣೆಯಲ್ಲಿ ಸ್ಪರ್ಧಿಸುವ ಸದಸ್ಯರುಗಳು ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ | ದಿನಾಂಕ 18.07.2023<br>ಮಂಗಳವಾರ<br>ಬೆಳಿಗ್ಗೆ 11.00 ರಿಂದ 5.00 ಗಂಟೆಯವರೆಗೆ<br>ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ |
| 2. | ಚುನಾವಣೆಯಲ್ಲಿ ಸ್ಪರ್ಧಿಸುವ ಸದಸ್ಯರುಗಳು ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ<br>(ನಿಯಮ 14ಎ) | ದಿನಾಂಕ 22.07.2023<br>ಶನಿವಾರ<br>ಸಂಜೆ 5.00 ಗಂಟೆಯವರೆಗೆ<br>ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ |
| 3. | ನಾಮಪತ್ರಗಳ ಪರಿಶೀಲನೆ,<br>(ರಿಟರ್ನಿಂಗ್ ಅಧಿಕಾರಿಗಳಿಂದ)<br>(ನಿಯಮ 14ಬಿ) | ದಿನಾಂಕ 23.07.2023<br>ಭಾನುವಾರ<br>ಮಧ್ಯಾಹ್ನ 12.00 ಗಂಟೆಗೆ<br>ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ |
| 4. | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅರ್ಹ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ.<br>(ನಿಯಮ 14 ಬಿ(4) | ದಿನಾಂಕ: 23.07.2023<br>ಭಾನುವಾರ<br>ನಾಮಪತ್ರ ಪರಿಶೀಲನೆ ನಂತರ<br>ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ |

| | | |
|---|---|---|
| 5. | ಸ್ಪರ್ಧಾ ಕಣದಲ್ಲಿರುವ ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಹಿಂಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ (ನಿಯಮ14 ಸಿ) | ದಿನಾಂಕ: 24.07.2023<br>ಸೋಮವಾರ<br>ಮಧ್ಯಾಹ್ನ 3.00<br>ಗಂಟೆಯವರೆಗೆ<br>ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ |
| 6. | ಸ್ಪರ್ಧಾ ಕಣದಲ್ಲಿ ಉಳಿದ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ ರಿಟರ್ನಿಂಗ್ ಅಧಿಕಾರಿಯಿಂದ<br>(ನಿಯಮ 14 ಡಿ) | ದಿನಾಂಕ: 24.07.2023<br>ಸೋಮವಾರ<br>ಮಧ್ಯಾಹ್ನ 3.00 ಗಂಟೆಯ<br>ನಂತರ<br>ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ |
| 7. | ಅಗತ್ಯವಾದಲ್ಲಿ ರಿರ್ಟನಿಂಗ್ ಅಧಿಕಾರಿಗಳಿಂದ ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆ ಹಂಚಿಕೆ ಮಾಡುವುದು (ನಿಯಮ 14 ಇ) | ದಿನಾಂಕ: 24–07–2023<br>ಸೋಮವಾರ<br>ಮಧ್ಯಾಹ್ನ 3.00 ಗಂಟೆಯ<br>ನಂತರ ಬ್ಯಾಂಕಿನ ಪ್ರಧಾನ<br>ಕಛೇರಿಯಲ್ಲಿ |
| 8. | ಚಿಹ್ನೆ ಸಹಿತ ಸರ್ಧೆಯಲ್ಲಿರುವ ಕ್ರಮಬದ್ದ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ<br>(ನಿಯಮ 14 ಇ ಮತ್ತು ಎಫ್) | ದಿನಾಂಕ: 25.07.2023<br>ಮಂಗಳವಾರ ಮಧ್ಯಾಹ್ನ 3.00<br>ಗಂಟೆಗೆ<br>ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ |
| 9. | ಚುನಾವಣಾ ಸ್ಥಳ, ದಿನಾಂಕ ಮತ್ತು ವೇಳೆ. | **"ದೇವಾಂಗ ಸಂಘ"** ಹಾಸ್ಟೆಲ್<br>ರಸ್ತೆ ಸಿಲ್ವರ್ ಜ್ಯೂಬಿಲಿ<br>ಕಟ್ಟಡ ಸಂಪಂಗಿರಾಮನಗರ,<br>ಬೆಂಗಳೂರು – 560027<br>**ದಿನಾಂಕ : 30.07.2023**<br>**ಭಾನುವಾರ ಬೆಳಿಗ್ಗೆ 09.00**<br>**ಗಂಟೆಯಿಂದ ಮಧ್ಯಾಹ್ನ 4.00**<br>**ಗಂಟೆಯವರೆಗೆ** |
| 10. | ಮತ ಎಣಿಕೆಯ ದಿನಾಂಕ ಮತ್ತು ವೇಳೆ | ದಿನಾಂಕ : 30.07.2023<br>ಭಾನುವಾರ ಮಧ್ಯಾಹ್ನ 4.00<br>ಗಂಟೆಯ ನಂತರ |
| 11 | ಚುನಾವಣಾ ಫಲಿತಾಂಶ ಪ್ರಕಟಣೆ | ದಿನಾಂಕ 30.07.2023<br>ಭಾನುವಾರ ಮತ ಎಣಿಕೆಯ<br>ನಂತರ |

**ಸೂಚನೆಗಳು :**

1. ಬ್ಯಾಂಕಿನ ಉಪನಿಯಮದ 39 ಪ್ರಕಾರ ಆಡಳಿತ ಮಂಡಳಿಗೆ ಒಟ್ಟು 13 ಜನ ನಿರ್ದೇಶಕರನ್ನು ಮಾತ್ರ ಚುನಾಯಿಸಬೇಕಾಗುತ್ತದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಕಲಂ 28ಎ ಪ್ರಕಾರ (3)ರ ರೀತ್ಯಾ, ಈ ಪೈಕಿ 01(ಒಂದು) ಸ್ಥಾನವನ್ನು ಪರಿಶಿಷ್ಟ ಜಾತಿಯವರಿಗೆ, 01(ಒಂದು) ಸ್ಥಾನವನ್ನು ಪರಿಶಿಷ್ಟ ಪಂಗಡದವರಿಗೆ ಮತ್ತು 02(ಎರಡು) ಸ್ಥಾನಗಳನ್ನು ಮಹಿಳೆಯರಿಗೆ ಮತ್ತು 01 (ಒಂದು) ಸ್ಥಾನವನ್ನು ಹಿಂದುಳಿದ ವರ್ಗದ ಪ್ರವರ್ಗ 'ಎ' ಗೆ, 01(ಒಂದು) ಸ್ಥಾನವನ್ನು ಹಿಂದುಳಿದ ವರ್ಗದ ಪ್ರವರ್ಗ 'ಬಿ' ಗೆ ಮೀಸಲಿರಿಸಲಾಗಿರುತ್ತದೆ / ಹಾಗೂ ಉಳಿದ 07 ಸ್ಥಾನಗಳು ಸಾಮಾನ್ಯ ವರ್ಗಕ್ಕೆ ಇರುತ್ತವೆ. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ / ಹಿಂದುಳಿದ ವರ್ಗದ ಮೀಸಲು ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಗಳು, ನಾಮಪತ್ರಗಳ ಜೊತೆಯಲ್ಲಿ ಆ ವರ್ಗಕ್ಕೆ ಸೇರಿದವರೆಂಬ ರುಜುವಾತಿಗಾಗಿ ಸಕ್ಷಮ ಪ್ರಾಧಿಕಾರದಿಂದ ನೀಡಲ್ಪಟ್ಟ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಸದಸ್ಯರು ತಮ್ಮ ನಾಮಪತ್ರಗಳಲ್ಲಿ ತಾವು ಯಾವ ಸ್ಥಾನಕ್ಕೆ ಸ್ಪರ್ಧಿಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.
2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ಮೀಸಲು ಸ್ಥಾನಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸದಿದ್ದರೆ ಅಂತಹ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.
3. ಕರ್ನಾಟಕ ಸಹಕಾರ ಸಂಘಗಳ ನಿಯಮ 14 ರ ಪ್ರಕಾರ ಚುನಾವಣೆಗೆ ಸ್ಪರ್ಧಿಸಲು ಇಷ್ಟಪಡುವ ಅಭ್ಯರ್ಥಿಗಳು ಚುನಾವಣೆಯಲ್ಲಿ ಮತ ಚಲಾಯಿಸಲು ಅರ್ಹತೆ ಹೊಂದಿರುವ ಒಬ್ಬ ಸದಸ್ಯರ ಸೂಚನೆಯೊಂದಿಗೆ ನಾಮಪತ್ರವನ್ನು ಸಲ್ಲಿಸಬೇಕು.
4. ಒಬ್ಬ ಸದಸ್ಯ ಒಬ್ಬ ಅಭ್ಯರ್ಥಿಯನ್ನು ಮಾತ್ರ ಸೂಚಿಸಲು ಅವಕಾಶವಿರುತ್ತದೆ. ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳನ್ನು ಸೂಚಿಸಿದ್ದಲ್ಲಿ, ಮೊದಲು ಸೂಚಿಸಿರುವ ಅಭ್ಯರ್ಥಿಯ ನಾಮಪತ್ರವನ್ನು ಅಂಗೀಕರಿಸಿ ಉಳಿದ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.
5. ನಿಯಮ 14(ಎ) ಪ್ರಕಾರ ಚುನಾವಣೆಗೆ ಸ್ಪರ್ಧಿಸುವ ಪ್ರತಿಯೊಬ್ಬ ಸಾಮಾನ್ಯ ಅಭ್ಯರ್ಥಿಯು ಬ್ಯಾಂಕಿಗೆ ರೂ. 2000/– (ರೂಪಾಯಿ ಎರಡು ಸಾವಿರ)ಗಳನ್ನು ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದ ಮೀಸಲು ಸ್ಥಾನ ಮತ್ತು ಮಹಿಳಾ ಮೀಸಲು ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಗಳು ಚುನಾವಣಾ ಠೇವಣಿಯ ಶೇಕಡ 50 ರಷ್ಟು ಅಂದರೆ ರೂ. 1,000/– ಗಳ ಠೇವಣಿಯನ್ನು ನಾಮಪತ್ರವನ್ನು ಸಲ್ಲಿಸುವ ಪೂರ್ವದಲ್ಲಿ ಬ್ಯಾಂಕಿನಲ್ಲಿ ಠೇವಣಿ ಹಣಸಂದಾಯ ಮಾಡಿ, ಇಲ್ಲವೇ ಬ್ಯಾಂಕರ್ಸ್ ಚೆಕ್ / ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು (ಬ್ಯಾಂಕಿನ ಹೆಸರಿನಲ್ಲಿ)ಪಡೆದು ನಾಮಪತ್ರದೊಂದಿಗೆ ಹಣ ಸಂದಾಯ ರಸೀತಿ ಬ್ಯಾಂಕರ್ಸ್ ಚೆಕ್ ಅಥವಾ ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಲಗತ್ತಿಸಬೇಕು. ಚುನಾವಣಾ ಠೇವಣಿಯನ್ನು

ಸಂದಾಯ ಮಾಡದೆ ಸಲ್ಲಿಸುವ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.

6. ನಾಮಪತ್ರಗಳ ಪರಿಶೀಲನೆ ಸಮಯದಲ್ಲಿ ಅಭ್ಯರ್ಥಿಗಳ ಹಾಜರಿರಬಹುದು.
7. ಚುನಾವಣೆಗೆ ಸ್ಪರ್ಧಿಸಲು ಇಚ್ಛಿಸುವ ಸದಸ್ಯರು ನಾಮಪತ್ರಗಳನ್ನು ಬ್ಯಾಂಕಿನ ಕೆಲಸದ ವೇಳೆಯಲ್ಲಿ ಪಡೆಯಬಹುದು.
8. ನಾಮಪತ್ರಗಳನ್ನು ಹಾಗೂ ಅವುಗಳನ್ನು ವಾಪಸ್ಸು ಪಡೆಯುವ ನಾಮಪತ್ರದ ಅರ್ಜಿಗಳನ್ನು ರಿಟರ್ನಿಂಗ್ ಅಧಿಕಾರಿಗೆ ಖುದ್ದಾಗಿ ಸಲ್ಲಿಸತಕ್ಕದ್ದು.
9. ಸದಸ್ಯರು ಯಾವುದಾದರೂ ಒಂದು ಸ್ಥಾನದಿಂದ ಮಾತ್ರ ಸ್ಪರ್ಧಿಸಲು ಅವಕಾಶವಿರುತ್ತದೆ.
10. 1960 ರ ಕರ್ನಾಟಕ ಸಹಕಾರ ಸಂಘಗಳ ನಿಯಮ 14(ಇ) ಪ್ರಕಾರ ರಿಟರ್ನಿಂಗ್ ಅಧಿಕಾರಿಯವರು ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳಿಗೆ (ರಾಷ್ಟ್ರೀಯ ಪಕ್ಷಗಳ ಮತ್ತು ಕರ್ನಾಟಕ ರಾಜ್ಯದ ಪ್ರಾದೇಶಿಕ ಪಕ್ಷಗಳ ಚಿಹ್ನೆಗಳನ್ನು ಹೊರತುಪಡಿಸಿ) ಚುನಾವಣಾ ಚಿಹ್ನೆ ನೀಡಲು ಅಧಿಕಾರ ಹೊಂದಿರುತ್ತಾರೆ.
11. ನಿಗದಿತ ಸಮಯ ಮತ್ತು ಅವಧಿಯ ನಂತರ ನೀಡುವ ನಾಮಪತ್ರಗಳನ್ನು ಸ್ವೀಕರಿಸುವುದಿಲ್ಲ.
12. ಸದಸ್ಯರು ಮತ ಚಲಾಯಿಸಲು ಮತಗಟ್ಟೆಗೆ ಬರುವಾಗ ಬ್ಯಾಂಕ್ ವಿತರಿಸಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.
13. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಪ್ರಕಾರ ಚುನಾವಣಾ ದಿನಾಂಕಕ್ಕೆ 12 ತಿಂಗಳ ಹಿಂದೆ ಸದಸ್ಯರಾದವರು ಮಾತ್ರ ಚುನಾವಣೆಯಲ್ಲಿ ಮತದಾನ ಮಾಡಲು ಅರ್ಹರಿರುತ್ತಾರೆ.
14. ಆಡಳಿತ ಮಂಡಳಿ ನಿರ್ದೇಶಕರಾಗಿ ಚುನಾಯಿತರಾಗಲು ಕಾಯಿದೆ ಮತ್ತು ನಿಮಯಗಳು ಹಾಗೂ ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿರತಕ್ಕದ್ದು.

ಸ್ಥಳ: ಬೆಂಗಳೂರು

ದಿನಾಂಕ: 14.07.2023

ಸಹಿ/–

**ಸೋಮಶೇಖರಯ್ಯ**

ರಿಟರ್ನಿಂಗ್ ಅಧಿಕಾರಿ

ದಿ ಕಂಟ್ರೋಲರ್ಸ್ ಆಫೀಸ್ ಕೋ–ಅಪರೇಟವ್ ಬಾಂಕ್ ಲಿ.,

ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ

Book-Post
Printed Matter

To

Sri/Smt...............................................................

.........................................................................

........................................................................

........................................................................

From

**The Comptrollers Office Co-operative Bank Ltd.**

**(A Bank of LIC Employees)**

No. 209, “Mahalakshmi”, Cubbonpet Main Road, Bangalore - 560 002